**All India Radio: Bangalore**
**National Bulletin In Kannada**
**02.04.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**02.04.2025 13.10 p.m.**
***************

ಮುಖ್ಯಾಂಶಗಳು

೧. ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ವಿಧೇಯಕ-೨೦೨೫ ಮಂಡನೆ

೨. ಮುಂಬೈ, ಪುಣೆ ಮತ್ತು ನಾಗ್ಪುರದಲ್ಲಿ 'ಎಐ' ಉತ್ಕೃಷ್ಠತಾ ಕೇಂದ್ರಗಳ ಸ್ಥಾಪನೆ ಕುರಿತ ಒಪ್ಪಂದಕ್ಕೆ ಮಹಾರಾಷ್ಟ್ರ ಸರ್ಕಾರ ಸಹಿ

೩. ಕಾರ್ಯಾಚರಣೆ ಮೂಲಕ ಗಾಜಾ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಇಸ್ರೇಲ್ ಯೋಜನೆ

೪. ಐಎಸ್ಎಲ್ ಫುಟ್‌ಬಾಲ್ ಟೂರ್ನಿ; ಮೊದಲ ಸೆಮಿಫೈನಲ್‌ನಲ್ಲಿಂದು ಬೆಂಗಳೂರು- ಗೋವಾ ಮುಖಾಮುಖಿ

೫. ಐಪಿಎಲ್ ಟಿ-೨೦ ಕ್ರಿಕೆಟ್; ಬೆಂಗಳೂರಿನಲ್ಲಿಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು- ಗುಜರಾತ್ ಟೈಟಾನ್ಸ್ ಹಣಾಹಣಿ

***************

ಲೋಕಸಭೆಯಲ್ಲಿಂದು ಕೇಂದ್ರ ಸಂಸದೀಯ ವ್ಯವಹಾರಗಳು ಮತ್ತು ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ವಕ್ಫ್ ತಿದ್ದುಪಡಿ ವಿಧೇಯಕ-೨೦೨೫ ಅನ್ನು ಮಂಡಿಸಿದ್ದಾರೆ.

ಈ ವೇಳೆ ಮಾತನಾಡಿದ ಸಚಿವರು, ಮೊದಲಿಗೆ ವಕ್ಫ್ ಕಾಯ್ದೆಯ ಪರಿಶೀಲನೆ ನಡೆಸಿದ ಜಂಟಿ ಸಂಸದೀಯ ಸದಸ್ಯರಿಗೆ ಧನ್ಯವಾದ ತಿಳಿಸಿದರು. ಈ ಕಾಯ್ದೆ ಕುರಿತಂತೆ ೯೭ ಲಕ್ಷ ೨೭ ಸಾವಿರದ ೭೭೨ ಪ್ರಸ್ತಾವಗಳು, ಸಲಹೆ, ಅಭಿಪ್ರಾಯಗಳನ್ನು ಸರ್ಕಾರ ಹಾಗೂ ಜಂಟಿ ಸಂಸದೀಯ ಸಂಸ್ಥೆ

ಸ್ವೀಕರಿಸಿದೆ. ಈ ಎಲ್ಲವುಗಳನ್ನು ಸರ್ಕಾರ ಪರಿಗಣಿಸಿದ್ದು, ಇಷ್ಟು ದೊಡ್ಡ ಮಟ್ಟದಲ್ಲಿ ಒಂದು ಕಾಯ್ದೆ ಕುರಿತಂತೆ ಪ್ರಸ್ತಾವ ಅಥವಾ ಸಲಹೆಗಳು ಬಂದಿದ್ದು ಇದೇ ಮೊದಲಾಗಿದೆ ಎಂದರು.

ತಿದ್ದುಪಡಿ ಕಾಯ್ದೆ ಕುರಿತು ವಿವರಿಸಿದ ಅವರು, ವಕ್ಫ್ ಮಂಡಳಿಯಲ್ಲಿ ಒಟ್ಟು ೨೨ ಸದಸ್ಯರು ಇರಲಿದ್ದು, ಇಬ್ಬರು ಮುಸ್ಲಿಂ ಮಹಿಳೆಯರಿಗೆ ಸ್ಥಾನ ಕಲ್ಪಿಸಲಾಗಿದೆ. ಇದರ ಜೊತೆಗೆ ಒಬ್ಬ ಸಂಸದ, ಒಬ್ಬ ಶಾಸಕ ಹಾಗೂ ೪ ಜನ ಮುಸ್ಲೀಮೇತರ ಸದಸ್ಯರು ಮಂಡಳಿಯಲ್ಲಿ ಇರಲಿದ್ದಾರೆ ಎಂದು ತಿಳಿಸಿದರು.

ಧ್ವನಿ: ಕಿರಣ್ ರಿಜಿಜು, ಕೇಂದ್ರ ಸಚಿವ ( ಸೆಕೆಂಡ್ಸ್ )

****************

ರಾಜ್ಯ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆಯ ಅಳವಡಿಕೆಯನ್ನು ಉತ್ತೇಜಿಸಲು ಮುಂಬೈ, ಪುಣೆ ಮತ್ತು ನಾಗ್ಪುರದಲ್ಲಿ ಕೃತಕ ಬುದ್ಧಿಮತ್ತೆ - 'ಎಐ' ಉತ್ಕೃಷ್ಠತಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತಂತೆ ಮಹರಾಷ್ಟ್ರ ಸರ್ಕಾರ ಹಾಗೂ ಮೈಕ್ರೋಸಾಫ್ಟ್ ಕಾರ್ಪೋರೇಷನ್ ನಡುವೆ ತಿಳುವಳಿಕಾ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಮುಂಬೈನ ಸೆಂಟರ್ ಫಾರ್ ಜಿಯೋ ಸ್ಪೇಷಿಯಲ್ ಅನಾಲೆಟಿಕ್ಸ್, ಉಪಗ್ರಹ ಚಿತ್ರಣ ವಿಶ್ಲೇಷಣೆ, ಪ್ರಾದೇಶಿಕ ದತ್ತಾಂಶ ನಿರ್ವಹಣೆ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಅಳವಡಿಕೆಗೆ ಆಡಳಿತದಲ್ಲಿ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಲು ಸಹಕರಿಸಲಿದೆ.

ಪುಣೆಯ ಉತ್ಕೃಷ್ಠತಾ ಕೇಂದ್ರ, ಅಪರಾಧ ತನಿಖಾ ಪ್ರಕ್ರಿಯೆಗಳು, ವಿಧಿ ವಿಜ್ಞಾನ ದತ್ತಾಂಶ ವಿಶ್ಲೇಷಣೆ ಮತ್ತು ಪುರಾವೆಗಳ ನಿರ್ವಹಣೆ ಹೆಚ್ಚಿಸಲು ಪ್ರಸ್ತುತವಿರುವ ವಿಧಿ ವಿಜ್ಞಾನ ಮೂಲಸೌಕರ್ಯದೊಂದಿಗೆ ಕೃತಕಬುದ್ಧಿಮತ್ತೆಯ ಅಳವಡಿಕೆಯನ್ನು  ಸಾಧಿಸಲು ಸಹಕರಿಸಲಿದೆ.

ನಾಗ್ಪುರದ ಉತ್ಕೃಷ್ಠತಾ ಕೇಂದ್ರ- ಮಾರ್ವೆಲ್, ಮೇಲ್ವಿಚಾರಣೆ, ಮುಂಜಾಗ್ರತೆ ಮತ್ತು ನವೀನ ಆಡಳಿತ ಸುಧಾರಣೆಗಳ ಮೂಲಕ ಸರ್ಕಾರಿ ಪ್ರಕ್ರಿಯೆಗಳಲ್ಲಿ 'ಎಐ' ಆಧಾರಿತ ಪರಿಹಾರಗಳನ್ನು ಬಲಪಡಿಸಲಿದೆ. ಸಾಮರ್ಥ್ಯ ವೃದ್ಧಿ ಖಚಿತಪಡಿಸಲು  ಮಾರ್ವೆಲ್ ಕೇಂದ್ರ ಹಾಗೂ 'ಐಐಎಂ'

ನಾಗ್ಪುರ್ ನಡುವೆ ಸಹಕಾರದ ಕುರಿತು ಚಿಂತನೆ ನಡೆದಿದೆ.

***************

ಇದೇ ೭ ಹಾಗೂ ೮ ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಜಮ್ಮು-ಕಾಶ್ಮೀರಕ್ಕೆ ಭೇಟಿ ನೀಡಲಿದ್ದು, ಅಲ್ಲಿನ ಭದ್ರತಾ ಸ್ಥಿತಿಗತಿ ಪರಿಶೀಲನೆ ಹಾಗೂ ಭದ್ರತಾ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ.

ತಮ್ಮ ಭೇಟಿಯ ವೇಳೆ ಅವರು, ಆ ಪ್ರದೇಶದಲ್ಲಿರುವ ಕಾನೂನು ಸುವ್ಯವಸ್ಥೆ ಕುರಿತು ಉನ್ನತಮಟ್ಟದ ಭದ್ರತಾ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ಮತ್ತು ಗುಪ್ತಚರ ಸಂಸ್ಥೆ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ವೇಳೆ, ಭಯೋತ್ಪಾದನೆ ವಿರುದ್ಧ ಕಾರ್ಯಾಚರಣೆ, ಅಂತರ್‌ಗಡಿ ನುಸುಳುವಿಕೆ ಯತ್ನಗಳ ಮೇಲೆ ಕಡಿವಾಣ ಮತ್ತು ಒಟ್ಟಾರೆ ಜಮ್ಮು-ಕಾಶ್ಮೀರ ಪ್ರದೇಶದ ಭದ್ರತೆಯ ಮೇಲೆ ಈ ಸಭೆ ಕೇಂದ್ರೀಕರಿಸಲಿದೆ.

ಈ ಭೇಟಿಯ ಭಾಗವಾಗಿ ಅವರು, ಅಂತಾರಾಷ್ಟ್ರೀಯ ಗಡಿ ಭಾಗಗಳಿಗೂ ತೆರಳಲಿದ್ದು, ಅಲ್ಲಿನ ಭದ್ರತಾ ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.

***************

ಗಾಜಾ ಪ್ರದೇಶದಲ್ಲಿ ಇಸ್ರೇಲ್ ಸೇನೆ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಲಿದ್ದು, ಅಲ್ಲಿನ ಪ್ರದೇಶಗಳನ್ನು ವಶಪಡಿಸಿಕೊಳ್ಳಲಿದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಸ್ ತಿಳಿಸಿದ್ದಾರೆ.

ಹೇಳಿಕೆಯೊಂದರಲ್ಲಿ ಮಾಹಿತಿ ನೀಡಿರುವ ಅವರು, ಈ ಕಾರ್ಯಾಚರಣೆಗಳು ಭಯೋತ್ಪಾದಕರು ಹಾಗೂ ಅವರ ಮೂಲಸೌಕರ್ಯಗಳನ್ನು ನಾಶ ಮಾಡಿ, ತೆರವುಗೊಳಿಸುವ ಗುರಿಯನ್ನು ಹೊಂದಿದೆ.

ವಶಪಡಿಸಿಕೊಂಡ ಪ್ರದೇಶಗಳನ್ನು ಇಸ್ರೇಲ್ ಭದ್ರತಾ ವಲಯಗಳಿಗೆ ಸೇರಿಸಲಾಗುವುದು ಎಂದಿದ್ದಾರೆ.

ಈ ಕಾರ್ಯಾಚರಣೆಗೆ ಪ್ಯಾಲಿಸ್ತೇನಿಯನ್ನರ ದೊಡ್ಡ ಪ್ರಮಾಣದ ಸ್ಥಳಾಂತರ ಅಗತ್ಯವಿದ್ದು, ಹಮಾಸ್‌ನನ್ನು ನಿರ್ಮೂಲನೆ ಮಾಡಲು ಇಸ್ರೇಲ್ ಒತ್ತೆಯಾಳುಗಳನ್ನು ಹಿಂದಿರುಗಿಸಲು ಅವರು ಅಲ್ಲಿನ ಜನರಿಗೆ ಕರೆ ನೀಡಿದ್ದು, ಯುದ್ಧವನ್ನು ಕೊನೆಗೊಳಿಸಲು ಇದು ಏಕೈಕ ಮಾರ್ಗವಾಗಿದೆ ಎಂದು ಸಚಿವ ಕಾಟ್ಸ್ ಹೇಳಿದ್ದಾರೆ.

***************

ರಾಷ್ಟ್ರ ಮೊದಲು ಎಂಬ ಮನೋಭಾವದೊಂದಿಗೆ, ದೇಶದ ಯುವ ಸಮುದಾಯ ಕಾರ್ಯ ನಿರ್ವಹಿಸಬೇಕು ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸೂಖ್ ಮಾಂಡವೀಯ ಹೇಳಿದ್ದಾರೆ.

ನವದೆಹಲಿಯಲ್ಲಿಂದು 'ವಿಕಸಿತ ಭಾರತ್ ಯುವ ಸಂಸತ್' ಉದ್ದೇಶಿಸಿ ಮಾತನಾಡಿದ ಅವರು, ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವಲ್ಲಿ ದೇಶದ ಯುವಕರು ಪ್ರಮುಖ ಪಾತ್ರ ವಹಿಸುತ್ತಾರೆ. ಯುವಕರನ್ನು ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಲು ಪ್ರೇರೇಪಿಸುವುದು ಈ ಎರಡು ದಿನಗಳ ಕಾರ್ಯಕ್ರಮದ ಗುರಿಯಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ದೇಶದ ೩೦೦ ಜಿಲ್ಲೆಗಳ ಯುವಕರು ಪಾಲ್ಗೊಂಡಿದ್ದು, ದೇಶದ ಪ್ರಜಾಪ್ರಭುತ್ವ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಅವಕಾಶ ಕಲ್ಪಿಸಿದೆ.

ಧ್ವನಿ: ಮನ್ಸೂಖ್ ಮಾಂಡವೀಯ (  ಸೆಕೆಂಡ್ಸ್)

***************

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಂದು ಹೊಸ ಸುಂಕಗಳನ್ನು ವಿಧಿಸಲಿದ್ದಾರೆ ಎಂದು ಶ್ವೇತಭವನ ದೃಢಪಡಿಸಿದೆ.

ಅಮೆರಿಕದ ಸರಕುಗಳ ಮೇಲೆ ಸುಂಕ ವಿಧಿಸುವ ದೇಶಗಳ ಮೇಲೆ ಪರಸ್ಪರ ಸುಂಕಗಳನ್ನು, ಡೊನಾಲ್ಡ್ ಟ್ರಂಪ್ ಘೋಷಿಸಿದ ತಕ್ಷಣ ಜಾರಿಗೆ ಬರಲಿವೆ. ವಾಹನ ಆಮದುಗಳ ಮೇಲೆ ಶೇಕಡ ೨೫ ರಷ್ಟು ಸುಂಕ ನಾಳೆ ಜಾರಿಗೆ ಬರಲಿದೆ ಎಂದು ಶ್ವೇತಭವನದ ವಕ್ತಾರರಾದ ಕ್ಯಾರೋಲಿನ್ ಲೀವಿಟ್ ತಿಳಿಸಿದ್ದಾರೆ.

***************

ಗುಜರಾತ್‌ನ ಬನಸ್ಕಾಂತ ಜಿಲ್ಲೆಯ ದೀಸಾ ಪಟ್ಟಣದಲ್ಲಿ ನಿನ್ನೆ ಸಂಭವಿಸಿದ ಭಾರಿ ಸ್ಫೋಟದಲ್ಲಿ ಪಟಾಕಿ ಗೋದಾಮು ಕುಸಿದು ಸುಮಾರು ೨೧ ಮಂದಿ ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಸ್ಥಳೀಯ ಅಪರಾಧ ವಿಭಾಗ, ಅಕ್ರಮವಾಗಿ ನಡೆಸಲಾಗುತ್ತಿದ್ದ ಗೋದಾಮಿನ ಮಾಲೀಕರು ಸೇರಿದಂತೆ ಇಬ್ಬರನ್ನು ಬಂಧಿಸಿದೆ.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಮೃತಪಟ್ಟವರ ಕುಟುಂಬಸ್ಥರಿಗೆ ೪ ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

ಇಂದು ಮಹಾರಾಷ್ಟ್ರದಲ್ಲಿ ಮತ್ತೊಂದು ದುರ್ಘಟನೆ ಸಂಭವಿಸಿದ್ದು, ಶಹಾಪುರ್ ಬುಲ್ದಾನಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಐದು ಜನರು ಸ್ಥಳದಲ್ಲೇ ಮೃತಪಟ್ಟಿದ್ದು, ೨೬ ಜನರು ಗಾಯಗೊಂಡಿದ್ದಾರೆ.

***************

ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಇಂಡಿಯನ್ ಸೂಪರ್ ಲೀಗ್- ಐಎಸ್‌ಎಲ್ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡ, ಗೋವಾ ಫುಟ್‌ಬಾಲ್ ಕ್ಲಬ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

***************

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಸೆಣಸಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಪ್ರಾರಂಭವಾಗಲಿದೆ.

ಉತ್ತರ ಪ್ರದೇಶದ ಏಕಾನ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ೮ ವಿಕೆಟ್‌ಗಳಿಂದ ಮಣಿಸಿದೆ.

****************

ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿ ನಾಳೆಯಿಂದ ಆರಂಭವಾಗಲಿರುವ ಐಎಸ್‌ಎಸ್‌ಎಫ್ ವಿಶ್ವಕಪ್-೨೦೨೫ ರಲ್ಲಿ ೪೩ ಸದಸ್ಯರ ಭಾರತೀಯ ಶೂಟಿಂಗ್ ತಂಡವನ್ನು ಮನು ಭಾಕರ್ ಮುನ್ನಡೆಸಲಿದ್ದಾರೆ. ಉದ್ಘಾಟನಾ ಸಮಾರಂಭ ಇಂದು ನಡೆಯಲಿದೆ.

********ಮುಕ್ತಾಯ********